ಖುಷಿಯಲ್ಲಿ ಐನೋರು, ಶ್ಯಾನುಭೋಗ, ಬಿಟ್ಟಿ ಪರಮೇಶಿ ಕುಲುಕಲು ನಗುತ್ತಿದ್ದರು.

ಮೊದಲೇ, ತನ್ನ ಹೆಸರಿಗೆ ಹೊಲ ಬರೆಸಿಕೊಳ್ಳುವ ಎಲ್ಲ ಕಾಗದ ಪತ್ರಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದ ಬೋರೆಗೌಡ, ಕೆಂಚಪ್ಪ ಬಂದ ಕೂಡಲೇ ಹಿರಿಯರ ಸಮ್ಮುಖ ಕಾರವಾಯಿ ಶುರು ಮಾಡಿದ. ಇನ್ನೇನು ಕೆಂಚಪ್ಪ ಖರೀದಿ ಪತ್ರಕ್ಕೆ ಹೆಬ್ಬೆಟ್ಟು ಒತ್ತಬೇಕು ಅನ್ನುವಷ್ಟರಲ್ಲಿ 'ಒಂದ್ನಿಮಿಷ ನಿಲ್ಲು ಕೆಂಚಪ್ಪ...' ಎಂಬ ದೊಡ್ಡ ದನಿ ಕೇಳಿ ಬಂತು. ಎಲ್ಲರೂ ಶಾಕ್ ಆಗಿ ದನಿ ಬಂದ ಕಡೆ ತಿರುಗಿದರೆ... ನಭೀಸಾಬ್ ನಗುತ್ತಾ ಕೈಮುಗಿದು ನಿಂತಿದ್ದ.

ನಭೀಸಾಬ್ ಬಸಾಪೂರದ ಇಸ್ಲಾಂಗಲ್ಲಿಯವರು, ಹಣ್ಣಿನ ವ್ಯಾಪಾರ ಮಾಡುತ್ತಾ ಬದುಕು ಸಾಗಿಸುತ್ತಿದ್ದ ಇವರು, ಸ್ವಂತ ಪರಿಶ್ರಮದಿಂದ ಉನ್ನತ ಹಂತಕ್ಕೆ ತಲುಪಿ, ಸದ್ಯಕ್ಕೆ ವ್ಯಾಪಾರವನ್ನು ವಿದೇಶದಲ್ಲಿಯೂ ವಿಸ್ತರಿಸಿ ಅಲ್ಲಿಯೇ ನೆಲೆ ಕಂಡುಕೊಂಡವರು. ಪೂರ್ವಜರು ಬಸಾಪೂರದಲ್ಲಿಯೇ ಇರುವುದರಿಂದ ಅವರನ್ನು ಭೇಟಿ ಮಾಡಲು ಕೆಲವು ದಿನಗಳ ಹಿಂದೆ ಬಂದಿದ್ದರು. ಅವರಿಗೆ ಹೇಗೋ ಕೆಂಚಪ್ಪನ ಹೊಲದ ವಿಷಯ ಗೊತ್ತಾಗಿ, ಬೋರೆಗೌಡನ ದುಷ್ಟಬುದ್ಧಿ ತಿಳಿದಿದ್ದರಿಂದ ಅಲ್ಲಿಗೆ ದೌಡಾಯಿಸಿ ಬಂದಿದ್ದರು. ಅವರು ಹಾಗೇ ಬಂದಿರಲಿಲ್ಲ, ಕೆಂಚಪ್ಪನ ಸಾಲ ತೀರಿಸಲು ಎಲ್ಲ ವ್ಯವಸ್ಥೆ ಮಾಡಿಕೊಂಡೇ ಬಂದಿದ್ದರು.

'ಬೋರೆಗೌಡ್ರೇ ಸಲಾಂ, ಕೆಂಚಪ್ಪನ ಹೊಲಾ ನೀವೇನೂ ಬರಿಸಿಕೊಳ್ಳೋದು ಬೇಕಾಗಿಲ್ಲ. ನಿಮ್ದು ಪೈಸೆಗೆ ಪೈಸೆ ಹಣಾನ ನಾನು ಚುಕ್ತಾ ಮಾಡ್ತೀನಿ. ಪಾಪ, ಬಡವನ ಹೊಟ್ಟೆ ಮೇಲೆ ಹೊಡೆದರೆ ಅಲ್ಲಾ ಮೆಚ್ಚತಾನ? ಅವ್ನು ಮಳಿಬೇಳಿ ಎಲ್ಲಾ ಚಂದಾಗಿ ಬಂದು, ದುಡ್ಡು ಕೈಗೆ ಬಂದ ಮೇಲೆ ನಮ್ದುಕೇ ಕೊಟ್ರೆ ಸಾಕು. ಈ ಚೆಕ್ಕಿನಲ್ಲಿ ನಿಮಗ ಸೇರಬೇಕಾದ ಅಮೌಂಟ್ ಲಿಖ್ ದಿಯಾ ಹೈ' ಎಂದು ಚೆಕ್ ಅನ್ನು ಬೋರೆಗೌಡನಿಗೆ ನೀಡಿದರು.

ಐನೋರು, ಶ್ಯಾನುಭೋಗ, ಬಿಟ್ಟಿ ಪರಮೇಶಿ ಬಿಟ್ಟ ಬಾಯಿ ಬಿಟ್ಟಂತೆ ನೋಡುತ್ತಲೇ ಇದ್ದರು. ಈ ನಭೀ ಅಡ್ಡಬಂದು ಎಲ್ಲಾ ಪ್ಲಾನ್ ಹಾಳು ಮಾಡಿದ್ದು ಸಿಟ್ಟು ತರಿಸಿದರೆ, ರಾತ್ರಿ ಸಲ್ಲಬೇಕಾದ ವ್ಯವಸ್ಥೆ ಕೈ ತಪ್ಪಿ ಹೋಗಿದ್ದು ಮತ್ತಷ್ಟು ಹೊಟ್ಟೆ ಉರಿಸಿತ್ತು. ಬೋರೆಗೌಡ ಕೂಡ 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಅನ್ನೋ ಚಡಪಡಿಕೆಯಲ್ಲಿ ಒದ್ದಾಡುತ್ತಿದ್ದ. ಆದರೆ ಕೆಂಚಪ್ಪ ಮಾತ್ರ ಯಾವುದೋ ಪವಾಡ ನಡೆದವರಂತೆ ಅವಾಕ್ಕಾಗಿ ನಿಂತುಬಿಟ್ಟಿದ್ದ. ಜಮೀನಿನ ಆಸೆಯನ್ನೇ ಕೈಬಿಟ್ಟಿದ್ದ ಕೆಂಚಪ್ಪನಿಗೆ ನಭೀ ದೇವರಂತೆ ಬಂದು ಬದುಕಿನ ಆಸರೆಯನ್ನು ಮರಳಿಸಿದ್ದು ಎಲ್ಲಿಲ್ಲದ ಅಚ್ಚರಿಯ ಜೊತೆಗೆ ಖುಷಿಯ ಪಾರವನ್ನೇ ದಾಟಿಸಿತ್ತು. ಶ್ರಾವಣದಲ್ಲಿ ಸಂತರು ಹೇಳಿದ್ದ ಬುದ್ಧನ ಸಂದೇಶವೊಂದು ಹೀಗೆ ನೆನಪಾಯ್ತು ಕೆಂಚಪ್ಪನಿಗೆ... 'ನೂರು ಉಪದೇಶಗಳಿಗಿಂತಲೂ ಆಪತ್ಕಾಲದಲ್ಲಿ ಮಾಡಿದ ಒಂದು ಸಹಾಯವೂ ಶ್ರೇಷ್ಠವಾದದ್ದು'. ಕಾಲಿಗೆ ಬೀಳಲು ಹೊರಟ ಕೆಂಚಪ್ಪನನ್ನು ನಭೀ ಬಾಚಿ ತಬ್ಬಿಕೊಂಡಿದ್ದ. 'ನಿಂಗ ಯಾದ್ ಇರಲಿಕ್ಕಿಲ್ಲ ಕೆಂಚಪ್ಪ ಆದ್ರ ನಂಗ ಐತಿ. ನಾನು ಹಣ್ಣಿನ ವ್ಯಾಪಾರ ಮಾಡೂವಾಗ ಒಮ್ಮೊಮ್ಮಿ ಹೊಟ್ಟೆ ಹಸಿದು ಕೊಂಡಿರುತ್ತಿದ್ದೆ, ಆಗ ನೀನು ನಿಮ್ಮ ಮನೀಗೆ ಕರೆದೊಯ್ದು ಖಾನಾ ಬಡಿಸಿದ್ದು ಮರಿತಿಲ್ಲ. ಒಮ್ಮಿ ಥಂಡೀ ಜ್ವರಾ ಬಂದು ದುಖಾನ್‌ದಲ್ಲಿ ಒದ್ದಾಡುತ್ತಿದ್ದಾಗ, ದವಾಖಾನಿಗೆ ಕರ್ಕೊಂಡು ಹೋಗಿ ದವಾ ಕೊಡಿಸಿದ್ದೆ. ನನ್ನ ಬೇಟಾ ಅಶ್ರಫ್ ಕೋ ನಿನ್ನ ಹೆಗಲ ಮ್ಯಾಲ ಕೂರಿಸಿ ಜಾತ್ರೀ ಪೂರಾ ತೋರಿಸಿದ್ದು ನಾ ಹೆಂಗ ಮರೀಲಿ. ಸುಭೇ ಅವನಿಗೆ ಫೋನ್ ಮಾಡಿ ನಿನ್ನ ವಿಷ್ಯ ತಿಳಿಸಿದಾಗ ಅಂವಾ ಏನ ಹೇಳ್ದ ಪತಾ ಹೈ ಕ್ಯಾ? 'ಅಬ್ಬೂ ಹೆಂಗರ ಮಾಡಿ ಕೆಂಚಪ್ಪನ ಹೊಲ ಉಳಿಸಿಕೊಡಿ... ಅಲ್ಲಾ ಖುಷ್ ಹೋಗಾ' ಅಂದ. ಇಂದು ಖುದಾ ನಂಗ ಒಂದೊಳ್ಳೆ ಕೆಲ್ಸಕ್ಕ ಇಲ್ಲಿ ಕಳಿಸ್ಯಾನ ಅಂದ್ಕೊಂಡೆ. ಅಳಬ್ಯಾಡ, ಇನ್ನ ಮ್ಯಾಲ ನಿನ್ನ ಹೊಲ ನಿಂಗಷ್ಟೇ ಸೇರಿದ್ದು'.

ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿ ನಿಂತ ದೃಶ್ಯ ಇಡೀ ಊರಿನ ಜನ ಧನ್ಯತೆಯಿಂದ ಕಣ್ತುಂಬಿಕೊಂಡರು. ಕೆಂಚಪ್ಪನ ಕಣ್ಣೊಳಗೆ ಕೃತಜ್ಞತೆಯ ಕಡಲು ಉಕ್ಕೇರುತ್ತಿತ್ತು. ಬಸಾಪೂರ ಗ್ರಾಮ ಜಾತಿ, ಧರ್ಮ ಮೀರಿ ನಿಂತು ಮನುಷ್ಯತ್ವವನ್ನೇ ದೇವರನ್ನಾಗಿಸಿ 'ಕಷ್ಟಕ್ಕೆ ಮಿಡಿವ ಪ್ರತಿ ಹೃದಯವೂ ಪರಮಾತ್ಮನಿಗೆ ಸಮೀಪ' ಎಂಬ ಸಂದೇಶಕ್ಕೆ ಸಾಕ್ಷಿಯಾಗಿ ತಲೆಬಾಗಿ ನಿಂತಿತ್ತು.

●